**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಚೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-1

ಸಂಖ್ಯೆ: ಡಿಟಿಇ 02 ಮಾಹಕಾ 2019 ದಿನಾಂಕ: 5-04-2019

---

# ಸುತ್ತೋಲೆ

**ವಿಷಯ :** ಮಾಹಿತಿ ಹಕ್ಕು ಅಧಿನಿಯಮ 2005ರ ಅನುಸಾರ 2018-19 ಸಾಲಿನ ಸೆಕ್ಷನ್ 4(1)ಎ ಮತ್ತು 4(1)ಬಿ ಸೂಚಿಪಟ್ಟಿ ತಯಾರಿಸಿ ವೆಬ್‌ಸೈಟ್‌ಗೆ ಅಳವಡಿಸುವ ಬಗ್ಗೆ.

***

ಮಾಹಿತಿ ಹಕ್ಕು ಅಧಿನಿಯಮ 2005ರ ಅನುಸಾರ ಸೆಕ್ಷನ್ 4(1)ಎ ಅನ್ವಯ ಪ್ರತಿ ಶಾಖೆಯಲ್ಲಿರುವ ಕಡತಗಳನ್ನು ಅನುಕ್ರಮಣಿಕೆ/ಪಟ್ಟಿಯನ್ನು ಮತ್ತು **4(1)ಬಿ ರನ್ವಯ** ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು ಸೇರಿದಂತೆ **ಒಟ್ಟು 17** ಅಂಶಗಳ ಬಗ್ಗೆ ಮಾಹಿತಿಯನ್ನು ಪ್ರತಿವರ್ಷವೂ ಕಾಲೋಚಿತಗೊಳಿಸಿ ತಮ್ಮ ತಮ್ಮ ಸಂಸ್ಥೆಗಳ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಪ್ರಿನ್ಸಿಪಾಲರುಗಳು ತುರ್ತು ಕ್ರಮ ಕೈಗೊಂಡು, 2018-19 ನೇ ಸಾಲಿಗೆ ಸಂಬಂಧಿಸಿದಂತೆ, 4(1) ಎ ಮತ್ತು 4(1)ಬಿ ಗೆ ಸಂಬಂಧಿಸಿದ ಮಾಹಿತಿಯನ್ನು ತಮ್ಮ ತಮ್ಮ ಸಂಸ್ಥೆಯ ವೆಬ್ ಸೈಟ್ ನಲ್ಲಿ **ದಿ:30-4-2019** ರೊಳಗಾಗಿ ಪ್ರಕಟಿಸಲು ಸೂಚಿಸಿದೆ.

ನಿರ್ದೇಶಕರು

ಇವರಿಗೆ :

1. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು
2. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಪಾಲಿಟೆಕ್ನಿಕ್‌ಗಳು
3. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು
4. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು